ದಿಗ್ಗನೆ ಎದ್ದು ನಿಂತು, 'ಏನಂತೆ ಮಾನಸಿ?...' ಕಾತುರದಿಂದ ಕೇಳಿದಳು.

ಮಾನಸಿ ಎಲ್ಲವನ್ನೂ ಹೇಳಿ, 'ನಿಂಗೆ ಆ ಡಾಕ್ಟರ್ ಶಿವಾನಂದ ಅವರ ಫೋನ್ ನಂಬರ್ ಗೊತ್ತಾ?' ಎಂದು ಕೇಳಿದಳು.

'ಅಂ... ನನ್ನ ಹತ್ತಿರ ಇಲ್ಲ. ತಾಳು ಟೇಬಲ್ಲಿನ ಮೇಲೆ ಅವಳ ಟೆಲಿಫೋನ್ ಡೈರಿಯಲ್ಲಿರ್ಬೇಕು. ನೋಡಿ ಹೇಳ್ತೀನಿ...' ಎಂದ ಮೀರಾ ಸಾಕ್ಷಿಯ ಮೇಜಿನ ಮೇಲೆ, ಪುಸ್ತಕಗಳ ನಡುವೆಯಿದ್ದ ಟೆಲಿಫೋನ್ ಡೈರಿಯನ್ನು ಕೆದಕಿ, ಹುಡುಕಿ ತೆಗೆದು ಶಿವಾನಂದನ ಫೋನ್ ನಂಬರನ್ನು ಕೊಟ್ಟಳು.

ಮಾನಸಿ ಡಾಕ್ಟರ್ ಶಿವಾನಂದನಿಗೆ ಫೋನ್ ಮಾಡಿದಳು. ಶಿವಾನಂದ 'ಹಲೋ' ಎಂದ ಕೂಡಲೆ ಮಾನಸಿ, 'ಶಿವಾನಂದ್... ನಾನು ಮಾನಸಿ... ಸಾಕ್ಷಿಯ ರೂಂಮೇಟ್...' ಎಂದಳು.

'ಹೇಳಿ ಡಾಕ್ಟ್ರೆ... ಏನು ವಿಷಯ?'

'ಶನಿವಾರ ಸಂಜೆ ಸಾಕ್ಷಿ ನಿಮ್ಮನ್ನು ನೋಡಲು ಬಂದಿದ್ದಳಾ?'

'ಹೂಂ... ಶನಿವಾರ ಅನಾಟಮಿಯ ಹಾಲ್ ಮಧ್ಯಾಹ್ನವೇ ಬಾಗಿಲು ಹಾಕಿರುತ್ತದೆ. ಅವಳಿಗದು ಮರೆತು ಹೋಗಿತ್ತಂತೆ. ಅದರಲ್ಲಿ ಅನಾಟಮಿಯ ಹಾಲ್‌ನ ಬಾಗಿಲು ಅರ್ಧ ತೆಗೆದಿತ್ತೂಂತ ಒಳಗೆ ಹೋಗಿ ನನ್ನ ಛೇಂಬರ್‌ನಲ್ಲಿ ಕುಳಿತು ನನಗೆ ಫೋನ್ ಮಾಡಿದ್ದಳು. ನನಗೆ ಗಾಬರಿಯಾಗಿತ್ತು, ಪ್ರೊಫೆಸರ್ ಇಳಂಗೋವನ್ ಒಂದೊಂದ್‌ಸಲ ರಾತ್ರಿ ಎಂಟು ಗಂಟೆಯವರೆಗೂ ಅವರ ಛೇಂಬರಿನಲ್ಲಿರ್ತಾರೆ. ಅವರೇನಾದ್ರೂ ಅವಳನ್ನು ನೋಡಿ ಬಿಟ್ಟರೆ ಗ್ರಹಚಾರ ಬಿಡಿಸಿ ಬಿಡ್ತಾರೆ ಅಂತ ಹೇಳಿ, ಅವಳನ್ನು ಲೈಬ್ರರಿಯ ಹತ್ತಿರ ಬರಲು ಹೇಳಿದ್ದೆ...'

'.....'

'ಸರಿ, ಬರ್‍ತೀನಿ. ನಿನಗೊಂದು ಶಾಕಿಂಗ್ ವಿಷಯ ಹೇಳ್ಬೇಕೂಂತ ಹೇಳಿದಳು. ಮೊದಲು ಅಲ್ಲಿಂದ ಬಾ... ಎಂದಿದ್ದೆ. ನಂತರ ನನ್ನ ರೂಮಿನಿಂದ ರೆಡಿಯಾಗಿ ಲೈಬ್ರರಿಯ ಹತ್ತಿರ ಹೋದೆ. ಏಳು ಗಂಟೆಯವರೆಗೂ ಅವಳು ಬರ್‍ತಾಳೇಂತಾ ಕಾಯುತ್ತಾ ಅಲ್ಲೇ ನಿಂತಿದ್ದೆ... ಮೂರು ನಾಲ್ಕು ಬಾರಿ ಫೋನ್ ಕೂಡಾ ಮಾಡಿದ್ದೆ. ಅವಳ ಫೋನಿನಿಂದ ನೀವು ಕರೆಯುತ್ತಿರುವ ನಂಬರು ವ್ಯಾಪ್ತಿಯ ಪ್ರದೇಶದೊಳಗಿಲ್ಲಾಂತ ಹೇಳೋಕೆ ಶುರುವಾಯಿತು. ಕತ್ತಲಾಯ್ತೂಂತ ಹಾಸ್ಟೆಲಿಗೆ ಹೋಗಿರ್ಬೇಕೂಂತ ನಾನೂ ಅಲ್ಲಿಂದ ನನ್ನ ರೂಮಿಗೆ ಬಂದು ಬಿಟ್ಟೆ...' ಶಿವಾನಂದ ಹೇಳುತ್ತಿದ್ದ. ಮಾನಸಿ ಮಾತನಾಡದೇ ಕೇಳಿಸಿಕೊಳ್ಳುತ್ತಿದ್ದಳು. ಅವಳ ಮುಖದಲ್ಲಾಗುತ್ತಿದ್ದ ಬದಲಾವಣೆ ಗಮನಿಸಿದ ಮೀರಾ, 'ಏನಂತೆ?' ಎಂದು ಗಾಬರಿಯಿಂದ ಕೇಳಿದಳು. ಕೈಸನ್ನೆಯಿಂದ ಅವಳನ್ನು ಸುಮ್ಮನಿರುವಂತೆ ಸೂಚಿಸಿದ ಮಾನಸಿ,

'ಮತ್ತೆ ನೀವು ಅವಳಿಗೆ ಫೋನ್ ಮಾಡ್ಲೇ ಇಲ್ವಾ?'– ಕೇಳಿದಳು.

'ರಾತ್ರಿ ಒಂಬತ್ತು ಗಂಟೆಗೆ ಮತ್ತೆ ಫೋನ್ ಮಾಡಿದ್ದೆ. ಮತ್ತದೇ ಉತ್ತರ... ಸುಮ್ಮನಾಗಿ ಬಿಟ್ಟೆ...' ಎಂದ ಶಿವಾನಂದ.

'.....'

'ಯಾಕೆ ಏನು ವಿಷಯ?'– ಶಿವಾನಂದ ಕೇಳಿದ. 'ನಾನು ನಾಳೆ

